ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 8 ಸಂ. 3 ಮಾರ್ಚ್ 2011 ರೂ.15

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
(ಅನು: ಶ್ಯಾಮಲಾದೇವಿ)

ನಾನು ಒಬ್ಬ ಧ್ಯಾನಿ ಎಂದು ಹೇಳಿದಾಗ, ಕೌಂಟರ್‌ನಲ್ಲಿ ಇದ್ದ ವ್ಯಕ್ತಿ, "ಹಾಗಾದರೆ, ನಿಮಗೆ ತುಂಬಾ ತಾಳ್ಮೆ ಇರಬೇಕು!" ಎಂದಳು. ನಾನು ನಕ್ಕೆ. ನನ್ನನ್ನು ಆಕೆ ಕೇಳಿದಳು, "ನಿಮಗೆ ಕೋಪ ಬರುವುದಿಲ್ಲವೇ?" ನಾನು ಪುನಃ ನಕ್ಕೆ. ನನಗೆ ಪ್ಯಾಕೆಟ್ ಕೊಟ್ಟಮೇಲೆ, ಆಕೆ ಮೆಚ್ಚುಗೆಯ ನಗೆ ಬೀರಿದಳು. ಆಕೆಯ ನಿರೀಕ್ಷೆಗಳಿಗೆ ತಕ್ಕಂತೆ ನಾನು ಬದುಕಬೇಕು ಎಂದು ನನ್ನನ್ನು ನಾನು ಎಚ್ಚರಿಸಿಕೊಂಡೆ. ನಾನು ಆಕೆಯ ಮೆಚ್ಚುಗೆಯ ನಗುವಿಗೆ ಅರ್ಹನಾಗಬೇಕು.

ಜನ, ಧ್ಯಾನಿಗಳಾದ ನಮ್ಮಿಂದ ಬಹಳಷ್ಟು ನಿರೀಕ್ಷಿಸುವುದು ಸಹಜ. ಇದು ಸರಿ. ಯಾರೊಬ್ಬರೂ ನಿರಾಶರಾಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನಮ್ಮಲ್ಲಿರುವ ತಾಳ್ಮೆ ಮತ್ತು ಶಾಂತಿ ಎಲ್ಲರಿಗೆ ಕಾಣುವಂತಿರಬೇಕು ಮತ್ತು ಅವನ್ನು ನಾವು ಸಹಜವಾಗಿ ವ್ಯಕ್ತಪಡಿಸಬೇಕು. ನಾವು ನಟನೆ ಮಾಡಬಾರದು. ತಾಳ್ಮೆ ಮತ್ತು ಶಾಂತಿಗಳನ್ನು ವ್ಯಕ್ತಪಡಿಸಬೇಕೆಂದರೆ ಮೊದಲು ಅವು ನಮ್ಮಲ್ಲಿ ಇರಬೇಕು. ನಾವು ನಿಯತವಾಗಿ ಧ್ಯಾನ ಮಾಡಿದರೆ ಮತ್ತು ಧ್ಯಾನದ ಪ್ರಭಾವ ನಮ್ಮ ಮುಖಾಂತರ ಕೆಲಸ ಮಾಡಲು ನಾವು ಅವಕಾಶ ಮಾಡಿಕೊಟ್ಟರೆ, ಇವೆಲ್ಲವೂ ಸಹಜವಾಗಿ ನಮ್ಮಲ್ಲಿ ಮನೆಮಾಡಿರುತ್ತವೆ. ವ್ಯಕ್ತಪಡಿಸುವಿಕೆ ಸಹಜ ಮತ್ತು ಸುಲಭ ಆಗಿರಬೇಕು. ಅದೆಂದೂ ಒಂದು ಪ್ರಯಾಸಕರ ಯತ್ನವಾಗಿರಬಾರದು ಅಥವಾ ಹೊರೆಯಾಗಿರಬಾರದು.

ನಾವು ಶಾಂತಿ ಮತ್ತು ತಾಳ್ಮೆಗಳ ಭಂಡಾರವಾಗಿರಬೇಕು ಮತ್ತು ಇತರ ಅನೇಕ ಸಕಾರಾತ್ಮಕ ಸಂಪತ್ತನ್ನು ನಾವು ಹೊಂದಿರಬೇಕು. ಇವನ್ನು ಜನ ನಮ್ಮಲ್ಲಿ ನಿರೀಕ್ಷಿಸುತ್ತಾರೆ ಎಂಬುದಕ್ಕಾಗಿ ಅಲ್ಲ, ಇವನ್ನು ಸಹಜವಾಗಿ, ಹೂವುಗಳು ನಗುವ ರೀತಿಯಲ್ಲಿ, ನಮ್ಮಲ್ಲಿ ಹೊಂದಿರುವುದಕ್ಕಾಗಿ.

ಈಜಿಪ್ಟ್‌ನ ಜನ ಅಧ್ಯಕ್ಷ ತನ್ನ ಪದವಿಯಿಂದ ಕೆಳಗಿಳಿಯುವಂತೆ ತಂದ ಒತ್ತಾಯ ಯಶಸ್ವಿಯಾಯಿತು. ಅಧಿಕಾರದಲ್ಲಿರುವವರು ಜನರ ಧ್ವನಿ ಕೇಳಲೇಬೇಕಾಯಿತು. ಮಾನವ ಇತಿಹಾಸದಲ್ಲೇ ಇದು ಒಂದು ಬಹಳ ಮುಖ್ಯ ಮತ್ತು ಮಹತ್ವದ ಬೆಳವಣಿಗೆ. ಈ ಜನಸ್ತೋಮಕ್ಕೆ ಅಭಿನಂದಿಸಬೇಕು. ರಸ್ತೆಗಳಲ್ಲಿದ್ದ ಗುಂಪುಗಳನ್ನಷ್ಟೇ ಅಲ್ಲ, ಮನೆಗಳಲ್ಲಿನ ಮೌನ ಧ್ವನಿಗಳನ್ನೂ ಕೂಡ ನಾವು ಜ್ಞಾಪಿಸಿಕೊಳ್ಳಬೇಕು. ಅವರಷ್ಟೇ ಅಲ್ಲ, ಪ್ರಪಂಚಾದ್ಯಂತ ಮೌನವಾಗಿ ತಮ್ಮ ಅಭಿಪ್ರಾಯವನ್ನು ಧ್ವನಿಸಿದ ಮಿಲಿಯಾಂತರ ಜನರನ್ನೂ ಸಹ ಅಭಿನಂದಿಸಬೇಕು. ಸಾಮೂಹಿಕ ಆಲೋಚನಾ-ಶಕ್ತಿಗೆ ತನ್ನದೇ ಆದ ನೇರ ಪ್ರಭಾವವಿತ್ತು ಮತ್ತು ಬದಲಾವಣೆ ಆಗಲೇಬೇಕಿತ್ತು. ಅದನ್ನು ಯಾರೂ ತಡೆಯಲಾಗಲಿಲ್ಲ.

ಇದು ಈಗಿನ ಶೈಲಿ ಮತ್ತು ಹೊಸಯುಗದ ರೀತಿ. ಇದು ಈಗಾಗಲೇ ಪ್ರಾರಂಭವಾಗಿದೆ. ನಾವು ಇತ್ತೀಚೆಗೆ ಸ್ಥಾಪಿಸಿರುವ ಹೊಸಯುಗದ ಚೈತನ್ಯಗಳು, ಫೋಟಾನ್ ಬೆಲ್ಟ್‌ನ ಚೈತನ್ಯಗಳು ಮತ್ತು ಗ್ರೇಟ್ ರಾ ಚೈತನ್ಯಗಳು ಒಟ್ಟಾಗಿ ಕೆಲಸಮಾಡುತ್ತಿವೆ. ಭ್ರಷ್ಟ ವ್ಯವಸ್ಥೆಗಳು ಕುಸಿಯಲು ಪ್ರಾರಂಭಿಸುತ್ತಿವೆ. ಈ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಬದಲಾವಣೆ ಪ್ರಾರಂಭವಾಗಿದೆ. ಇದನ್ನು ಯಾರು ಬೇಕಾದರೂ ಗಮನಿಸಬಹುದು.

ಧ್ಯಾನಿಗಳಾದ ನಮಗೆ ಹೆಚ್ಚಿನ ಜವಾಬ್ದಾರಿಗಳಿವೆ. ಧ್ಯಾನ ಮಾಡುವುದು ಮತ್ತು ಪ್ರಪಂಚದಾದ್ಯಂತ ಬೆಳಕನ್ನು ಹರಡುವುದು ನಮ್ಮ ಕೆಲಸ. ಇದರಿಂದ ಬದಲಾವಣೆಯ ಪ್ರಕ್ರಿಯೆಗಳು ಬಲಗೊಳ್ಳುತ್ತವೆ; ನಿರೀಕ್ಷಿತ ಮಹತ್ತರ ಬದಲಾವಣೆಗಳು ಸಂಭವಿಸುತ್ತವೆ. ಈ ಮಹತ್ತರ ಬದಲಾವಣೆಗಳು ಪ್ರೀತಿ ಮತ್ತು ಬೆಳಕಿನ ಹೊಸಯುಗ ನಿರ್ಮಾಣಕ್ಕೆ ದಾರಿ ಮಾಡಿಕೊಡುತ್ತವೆ.

2009 ಫೆಬ್ರವರಿ 26ರಂದು ನಾವು ಒಂದು ಕಾರ್ಯಕ್ರಮ ಮಾಡಿದೆವು. ಆಗ ಪ್ರಪಂಚದಾದ್ಯಂತ ಸಾವಿರಾರು ಜನ ಬೆಳಕನ್ನು ಚಾನಲ್ ಮಾಡಿದರು. ಆ ಸಂದರ್ಭದಲ್ಲಿ ಒಂದು ಮಹಾನ್ ಚೈತನ್ಯವನ್ನು ಈ ಭೂಮಿಗೆ ತರಲಾಯಿತು. ಈ ಚೈತನ್ಯ ಕೂಡಾ, ಇತರ ಚೈತನ್ಯಗಳೊಂದಿಗೆ ಭವಿಷ್ಯವನ್ನು ರೂಪಿಸುವುದರಲ್ಲಿ ಕೆಲಸಮಾಡುತ್ತಿದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.




**ಜನವರಿ 29ರಂದು ಪುಣೆಯಲ್ಲಿ ಗುರೂಜಿಯವರು ಉಪನ್ಯಾಸ ಕಾರ್ಯಕ್ರಮವನ್ನು ಬೆಳಕಿನ ಸಾಗರವನ್ನು ಅನುಭವಿಸುವ ಅಭ್ಯಾಸದೊಂದಿಗೆ ಆರಂಭಿಸುತ್ತಿರುವುದು.**

### ಸುದ್ದಿ–ಸೂಚನೆ

- 29–1–2011 ಮತ್ತು 30–1–2011ರಂದು ಗುರೂಜಿಯವರು ಮುಂಬೈ, ಪೂನಾ ಮತ್ತು ನಾಗಪುರಗಳಿಗೆ ಭೇಟಿ ನೀಡಿ ಧ್ಯಾನಿಗಳನ್ನು ಉದ್ದೇಶಿಸಿ ಮಾತನಾಡಿದರು. ಈ ಮೂರೂ ಕಾರ್ಯಕ್ರಮಗಳಲ್ಲಿ "Higher Communication and Other Realities" ಪುಸ್ತಕದ ಮರಾಠಿ ಅನುವಾದವನ್ನು ಬಿಡುಗಡೆ ಮಾಡಲಾಯಿತು.
- 01–02–2011ರಂದು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ ಅಮರ ಜಯಂತಿಯನ್ನು ಆಚರಿಸಲಾಯಿತು.
- 6–2–2011ರಂದು ತಪೋನಗರದಲ್ಲಿ ನಡೆದ ಅಮರ ಜಯಂತಿ ಕಾರ್ಯಕ್ರಮದಲ್ಲಿ 350ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.
- 6–2–2011ರಂದು ತಪೋನಗರದಲ್ಲಿ ನಡೆದ ಅಮರ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಯನ ಕೇಂದ್ರ ಸದಸ್ಯರ "Preparing for 2012" ಮತ್ತು ಸೀಮಾ ಅಲ್‌ಮೇಲ್‌ರವರ "iGuruji Vol-4" ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.
- ಸಾರ್ವಜನಿಕರಿಗಾಗಿ "ಉಚಿತ ಧ್ಯಾನ ಕಲಿಕೆ"ಯನ್ನು ಆನೇಕಲ್‌ನಲ್ಲಿ 16–2–2011 ರಂದು ಆಯೋಜಿಸಲಾಗಿತ್ತು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11–12<br>ವಿಶೇಷ ಧ್ಯಾನ ಮತ್ತು ಲೈಟ್ ಚಾನಲಿಂಗ್: ಮಧ್ಯಾಹ್ನ 12–1 |
| 02–03–11 | ಮಹಾ ಶಿವರಾತ್ರಿ ವಿಶೇಷ ಧ್ಯಾನ : ಮಧ್ಯಾಹ್ನ 12–1 |
| 13–03–11 | ಶಂಬಲಗ್ರೂಪ್ ಮಧ್ಯಾಹ್ನ 2 ಘಂಟೆಗೆ ಸಂಧಿಸುತ್ತದೆ |
| 20–03–11 | 'ರಾ' ಗ್ರೂಪ್ ಮಧ್ಯಾಹ್ನ 2 ಘಂಟೆಗೆ ಸಂಧಿಸುತ್ತದೆ |

6–4–2011ರಂದು ಬೆಳಿಗ್ಗೆ 11 ಘಂಟೆಗೆ ತಪೋನಗರದಲ್ಲಿ ನಮ್ಮ ಸಾಧಕರಿಗೆ ಓರಿಯಂಟೇಶನ್ ತರಗತಿಯನ್ನು ನಡೆಸಲಾಗುತ್ತದೆ. ದೂರಕಲಿಕೆಯ ಸಾಧಕರು ಕೂಡಾ ವೆಬ್‌ಕಾಸ್ಟ್ ಮೂಲಕ ಇದರಲ್ಲಿ ಭಾಗವಹಿಸಬಹುದು. ಆಸಕ್ತ ಸಾಧಕರು ತಮ್ಮ ಹೆಸರನ್ನು ದಿನಾಂಕ 31–3–2011ರ ಒಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬಹುದು. ಹೆಚ್ಚಿನ ವಿವರಕ್ಕಾಗಿ ನಮ್ಮ ಆಫೀಸನ್ನು ಸಂಪರ್ಕಿಸಿ.

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 02–01–11 | ಉಮೇಶ್ ಉಪಾಧ್ಯಾಯ, ಎಂ.ಕೆ. ಚಿಬ್ಬಾರ್ ಮತ್ತು ಚಂದ್ರಾ ಕೆ. |
| 09–01–11 | ಪ್ರೇಮಾ ಮಲ್ಯ ಮತ್ತು ಹಂಸವತಿ |
| 16–01–11 | ವಿಲಾಸ್ ಖೇಡೇಕರ್ ಮತ್ತು ಲಲಿತಾ ತೀರ್ಥ |
| 23–01–11 | ವೆಂಕಟೇಶ್, ಸೀಮಾ ಅಜಯ್ ಕುಮಾರ್, ವಿಜಯಕುಮಾರಿ ಮತ್ತು ರಂಗನಾಥ್ |
| 30–01–11 | ಚಂದ್ರಕಲಾ ಡಿ. ಮತ್ತು ಗಂಗಾದಾಯಿ ರಾಮನಾಥ್ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಬುಧ | ಮಹಾ ಶಿವರಾತ್ರಿ |
| 04 | ಶುಕ್ರ | ಅಮಾವಾಸ್ಯೆ |
| 13 | ಭಾನು | ಶುಕ್ಲ ಅಷ್ಟಮಿ |
| 15 | ಮಂಗಳ | ಶುಕ್ಲ ದಶಮಿ |
| 19 | ಶನಿ | ಪೂರ್ಣಿಮಾ<br>ಕಾಮದಹನ |
| 27 | ಭಾನು | ಕೃಷ್ಣಾಷ್ಟಮಿ |

**12–03–2011ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

**ಒಂದು ಚಿಕ್ಕ ಗುಂಪು ಕೆಲವು ನಿಗದಿತ ದಿನಗಳಲ್ಲಿ, ಗುರೂಜಿಯವರು ಮತ್ತು ಋಷಿಗಳು ಸೂಕ್ಷ್ಮ ಮಟ್ಟದಲ್ಲಿ ಅವರನ್ನು ಸಂಪರ್ಕಿಸಿ, ಸೂಚನೆ ಮತ್ತು ಸಂದೇಶಗಳನ್ನು ನೀಡುತ್ತಿದ್ದಾರೆ ಎಂದು ಹೇಳಿಕೊಳ್ಳುತ್ತಿದೆ ಎಂಬ ವರದಿ ನಮಗೆ ಬಂದಿದೆ. ಇದು ನಿಜವಲ್ಲ ಎಂದು ಗುರೂಜಿಯವರು ಸ್ಪಷ್ಟಪಡಿಸಿದ್ದಾರೆ.**

**ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇಮೇಲ್ ಮುಖಾಂತರ ಸಂಪರ್ಕಿಸಬಹುದು.**

ವಾರ್ತಾಪತ್ರದ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ವಿಶ್ವಸಂಚಲನ ದಿನವಾದ 1–2–2011ರಂದು ನಮ್ಮ ಲೈಟ್ ಚಾನಲ್ ಕಾರ್ಯಕರ್ತರ ಉತ್ಸಾಹಕ್ಕೆ ಪೂರಕವಾಗಿ ವಿವಿಧ ಶಾಲೆಗಳ ಪ್ರಾಂಶುಪಾಲರು, ಅಧ್ಯಾಪಕ ವೃಂದ ಮತ್ತು ಮಕ್ಕಳು ಪ್ರೋತ್ಸಾಹಿಸಿದರು. ಅಂದು ದೇಶದಾದ್ಯಂತ ನೂರಾರು ಶಾಲೆಗಳಲ್ಲಿ ಸುಮಾರು 4,00,000 ಮಕ್ಕಳಿಂದ ಮತ್ತು ಶಿಕ್ಷಕರಿಂದ ಲೈಟ್ ಚಾನಲ್ ಮಾಡಿಸಿ ಇದನ್ನು ಯಶಸ್ವಿಗೊಳಿಸಿದರು.
- ನಾವು ಶಾಲೆಗಳಲ್ಲಿ ಲೈಟ್ ಚಾನಲ್ ಮಾಡುವುದನ್ನು ಕಳೆದ ವರ್ಷ ಇದೇ ದಿನದಂದು ಆರಂಭಿಸಿದ್ದೆವು. ಶಾಲೆಯ ಆಡಳಿತ ವರ್ಗ ಮತ್ತು ಮಕ್ಕಳು ಈ ಬೆಳಕನ್ನು ತೆರೆದ ಹೃದಯದಿಂದ ಸ್ವಾಗತಿಸಿದುದರ ಪರಿಣಾಮವಾಗಿ ಕೇವಲ ಒಂದು ವರ್ಷದಲ್ಲಿ 16 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಲೈಟ್ ಚಾನಲ್ ಮಾಡಿದ್ದಾರೆ. ■

## ಲೈಟ್ ಚಾನಲಿಂಗ್ ಅನುಭವಗಳು

ನಮ್ಮ ವಿದ್ಯಾರ್ಥಿಗಳು ಕ್ಷಣ ಕಾಲ ಕೂಡಾ ಮೌನವಾಗಿ ಇದ್ದುದನ್ನು ನಾವು ನೋಡಿರಲಿಲ್ಲ. ಆದರೆ ಲೈಟ್ ಚಾನಲ್ ಕಾರ್ಯಕ್ರಮ ಅವರನ್ನು 10 ನಿಮಿಷಗಳ ಕಾಲ ಮೌನವಾಗಿರಿಸಿತು. ಇದೊಂದು ಪವಾಡ.

– ಮುಖ್ಯೋಪಾಧ್ಯಾಯಿನಿ, ಭಾರತೀದಾಸನ್ ಕಾರ್ಪೋರೇಶನ್ ಪ್ರೌಢಶಾಲೆ, ಮಧುರೈ

ಲೈಟ್ ಚಾನಲಿಂಗ್ ಸಮಯದಲ್ಲಿ ನನಗೆ ಬೆಳಕಿನ ಸ್ನಾನ ಮಾಡಿದಂತೆ ಅನಿಸಿತು ಮತ್ತು ನನ್ನ ಒಳಗಣ್ಣಿನಿಂದ ಬೆಳಕನ್ನು ನೋಡಿದೆ. ಆಗ ನನಗೆ, ಭಗವಾನ್ ವಿಷ್ಣುವಿನ ವಿಶ್ವರೂಪ ದರ್ಶನವನ್ನು ನೋಡಿದಾಗ ಅರ್ಜುನ ಬೆಳಕಿನ ಬಗ್ಗೆ ಹೇಳಿದ ಮಾತುಗಳು ಅರ್ಥವಾದವು.

– ಇಂದುಶೇಖರ್ ಎನ್., ಅಧ್ಯಾಪಕಿ, ಜೈನ್ ಹೆರಿಟೇಜ್ ಶಾಲೆ, ಬೆಂಗಳೂರು

ನಾವು ಈ ಹಿಂದೆ ಮಾಡುತ್ತಿದ್ದ ಧ್ಯಾನ ಹೆಚ್ಚು ಪರಿಣಾಮಕಾರಿಯಾಗಿರಲಿಲ್ಲ. ಈಗ ನಾವು ಪ್ರತಿನಿತ್ಯ 5 ನಿಮಿಷ ಲೈಟ್ ಚಾನಲ್ ತಂತ್ರವನ್ನು ಅಭ್ಯಾಸ ಮಾಡುತ್ತಿದ್ದೇವೆ. ಇದರಿಂದ ದುಡುಕು ಸ್ವಭಾವದ ವಿದ್ಯಾರ್ಥಿಗಳು ಈಗ ಶಾಂತವಾಗಿದ್ದಾರೆ. ತಂದೆತಾಯಿಯರ ಮಾತುಗಳನ್ನು ಕೇಳದ ಕೆಲ ವಿದ್ಯಾರ್ಥಿಗಳಿಗೆ ಈಗ ಅವರಿಗೆ ವಿಧೇಯರಾಗಿರಬೇಕೆಂದು ಅನಿಸುತ್ತಿದೆ ಎಂದು ತಿಳಿಸಿದರು. ನಮ್ಮ ವಿದ್ಯಾರ್ಥಿಗಳು ಈಗ ಹೆಚ್ಚು ಶಿಸ್ತುಬದ್ಧರಾಗಿದ್ದಾರೆ. ಅತಿ ಸರಳವಾದ ಈ ತಂತ್ರ ಹೆಚ್ಚು ಪರಿಣಾಮಕಾರಿಯಾಗಿದೆ.

– ಪ್ರದೀಪ್, ಶಿಕ್ಷಕರು, ಪಂಚವಟಿ ವಿದ್ಯಾ ಮಂದಿರ, ಬೆಂಗಳೂರು

## ತಪೋನಗರ ಡೈರಿ

ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಪಾಂಡುರಂಗ

2011ನೇ ವರ್ಷದ ಬಹು ನಿರೀಕ್ಷಿತ ಚೈತನ್ಯಗಳ ಬದಲಾವಣೆ, ವರ್ಷದ ಮೊದಲನೆ ತಿಂಗಳಾದ ಜನವರಿ ಗ್ರಹಣದೊಂದಿಗೆ ಪ್ರಾರಂಭಗೊಂಡಿತು. ಗ್ರಹಣದ ಚೈತನ್ಯಗಳೊಂದಿಗೆ 'ರಾ' ಚೈತನ್ಯಗಳು ಮತ್ತು ಶಂಬಲ ತರಗತಿಯ ಚೈತನ್ಯಗಳು, ಈ ವರ್ಷವನ್ನು ಆಶೀರ್ವದಿಸಿದವು. ಹೊಸವರ್ಷದ ಮೊದಲ ಎರಡು ವಾರದಲ್ಲಿದ್ದ ಶೂನ್ಯಮಾಸದ ಋಷಿಗಳು ಮತ್ತು ಮೂರನೇ ವಾರದಲ್ಲಿ ತಮ್ಮ ತಪಸ್ಸಿನಿಂದ ಹಿಂದಿರುಗಿದ ಋಷಿಗಳ ಆಗಮನ ಹೆಚ್ಚಿನ ಕೃಪೆಯನ್ನು ತಂದಿತು.

ಈ ತಿಂಗಳಲ್ಲಿ ಬಹಳಷ್ಟು ಘಟನೆಗಳು ನಡೆದವು. ತಪೋನಗರದಲ್ಲಿ ಗುರೂಜಿಯವರೊಂದಿಗೆ ಬಾನ್‌ಫೈರ್ ಕೂಟವನ್ನು ಆಯೋಜಿಸಲಾಗಿತ್ತು. ತಪೋನಗರ ನಿವಾಸಿಗಳ ಕೂಟವಾದ ತಕ್ಷಣ ಎಲ್ಲರೂ ಯುಟಿಲಿಟಿ ಬ್ಲಾಕ್‌ನ ಮಹಡಿ ಮೇಲಿನ ತೆರೆದ ಸ್ಥಳದಲ್ಲಿ ಸೇರಿದರು. ನಕ್ಷತ್ರಗಳಿಂದ ತುಂಬಿದ್ದ ಶೀತಲ ರಾತ್ರಿ, ಆ ಕೊರೆಯುವ ಚಳಿಯಲ್ಲಿ ನಾವೆಲ್ಲರೂ ಬೆಚ್ಚನೆಯ ಉಡುಪುಗಳೊಂದಿಗೆ ಬಾನ್‌ಫೈರ್ ಸುತ್ತ ಗುರೂಜಿಯವರೊಂದಿಗೆ ಕುಳಿತು, ಎಲ್ಲ ವಿಷಯಗಳ ಬಗ್ಗೆ ಚರ್ಚಿಸಿದೆವು. ಲಘು ತಿನಿಸುಗಳೊಂದಿಗೆ ಚಹಾ ಸೇವನೆ ಚರ್ಚೆಗೆ ಮತ್ತಷ್ಟು ಹುರುಪು ತಂದಿತ್ತು. ಗುರೂಜಿಯವರ ಸ್ನೇಹಪರತೆ ಮತ್ತು ಅವರ ಬೆಳಕು ಬಾನ್‌ಫೈರ್‌ನ ಬೆಂಕಿಯನ್ನು ನಾಚಿಸುತ್ತಿತ್ತು.

ಫೆಬ್ರವರಿ 1ರಂದು ಅಮರ ಜಯಂತಿಯನ್ನು ವಿಶ್ವಸಂಚಲನ ದಿನವಾಗಿ ಆಚರಿಸಲು, ಅದಕ್ಕೆ ಪೂರ್ವಭಾವಿಯಾಗಿ ಭಾನುವಾರದ ತರಗತಿಯ ನಂತರ ವಿಶೇಷ ಸಭೆಯನ್ನು ಕರೆಯಲಾಗಿತ್ತು. ಎಲ್ಲಾ ಸ್ಥಳೀಯ ಕಾರ್ಯಕರ್ತರು ಸೇರಿದ್ದರು ಮತ್ತು ಅವರು ಮಾಡಬೇಕಾಗಿರುವ ಕೆಲಸಗಳನ್ನು ಹಂಚಲಾಯಿತು. ತಿಂಗಳು ಪೂರ್ತಿ ಲೈಟ್ ಚಾನಲ್ ಕಾರ್ಡುಗಳನ್ನು ಕಳುಹಿಸುವುದರ ಜೊತೆಗೆ, ಸಂಬಂಧಪಟ್ಟ ವಿಷಯಗಳನ್ನು ಸಂಸ್ಕರಿಸಿ ಸಂಗ್ರಹಿಸಲಾಯಿತು. ಲೈಟ್ ಚಾನಲ್‌ನ ಪ್ರಧಾನ ತಂಡ ಬಿರುಸಿನಿಂದ ಕೆಲಸ ನಿರ್ವಹಿಸಿತು.

ಈ ಎಲ್ಲ ಬಿರುಸಿನ ಚಟುವಟಿಕೆಗಳ ಹಿಂಬದಿಯಲ್ಲಿ, ಅಧ್ಯಯನ ಕೇಂದ್ರದ ಸದಸ್ಯರೊಬ್ಬರು ಮೌನವಾಗಿ ಪುಸ್ತಕವೊಂದನ್ನು ಬರೆಯುತ್ತಿದ್ದರು. ಅದನ್ನು ತಪೋನಗರದಲ್ಲಿ ನಡೆದ ಅಮರ ಜಯಂತಿ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು. ಜನವರಿ ತಿಂಗಳು ಐದನೇ ಭಾನುವಾರದ ಮೂರು ಘಂಟೆಗಳ ಸಾಮೂಹಿಕ ಧ್ಯಾನದೊಂದಿಗೆ ಮುಕ್ತಾಯಗೊಂಡಿತು. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

02–01–2011

ಧ್ಯಾನ ಜೀವನದ ಒಂದು ಮಾರ್ಗ. ಧ್ಯಾನದ ಮೂಲಕ ನಾವು ಮುಕ್ತಿ ಪಡೆಯುತ್ತೇವೆ. ನಾವು ಅದನ್ನು ಗಂಭೀರವಾಗಿ ಪರಿಗಣಿಸಬೇಕು. ಋಷಿಗಳು ಸಾವಿರಾರು ವರ್ಷಗಳು ಕುಳಿತು ಗಳಿಸಿದ ತಪಸ್ಸಿನ ಶಕ್ತಿಯನ್ನು ದೀಕ್ಷೆ ಕೊಡುವ ಸಂದರ್ಭದಲ್ಲಿ ನಮಗೆ ನೀಡುತ್ತಾರೆ. ದೀಕ್ಷೆಯಲ್ಲಿ ಪಾವಿತ್ರ್ಯತೆ ಅಡಗಿದೆ. ನೀವು ದೀಕ್ಷೆಯನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಈ ದಿನ ನಾನು ಕೆಲವರಿಗೆ ದೀಕ್ಷೆ ಕೊಡಲಿಲ್ಲ, ಏಕೆಂದರೆ ಅವರು ಕೇವಲ 2 ಅಥವಾ 3 ದಿನಗಳು ಮಾತ್ರ ಧ್ಯಾನ ಮಾಡಿದ್ದರು ಮತ್ತು ಲೈಟ್ ಚಾನಲ್ ಮಾಡಿರಲಿಲ್ಲ. ದೀಕ್ಷೆ ಕೊಡಲಾಗದಿದ್ದುದಕ್ಕೆ ನನಗೆ ವಿಷಾದವೆನಿಸುತ್ತದೆ. ಆದರೆ ದೀಕ್ಷೆ ವಿಷಯದಲ್ಲಿ ರಾಜಿ ಸಾಧ್ಯವಿಲ್ಲ.

ಆಫೀಸಿನಲ್ಲಿರುವ ಒತ್ತಡಗಳಿಂದ ಮತ್ತು ಎಲ್ಲ ಕಡೆ ಇರುವ ಸಮಸ್ಯೆಗಳಿಂದ ಓಡಿಹೋಗೋಣ ಎನಿಸುತ್ತದೆ ಎಂದು ಒಬ್ಬ ವ್ಯಕ್ತಿ ಹೇಳಿದರು. ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಬ್ಬರ ಜೀವನ ಬಹಳ ಮುಖ್ಯ. ಇಲ್ಲಿ ಬಹಳ ಮುಖ್ಯವಾದ ಅಂಶವೆಂದರೆ, ಪ್ರತಿಯೊಂದು ವಿಷಯಕ್ಕೂ ತೃಪ್ತಿಯ ಗೆರೆಯನ್ನೆಳೆಯುವುದು. ಎಲ್ಲ ಸಮಸ್ಯೆಗಳಿಗೆ ನಮ್ಮ ಆಧ್ಯಾತ್ಮಿಕ ವೈಫಲ್ಯಗಳೇ ಕಾರಣವೆಂಬುದು ನಮಗೆ ಅರಿವಿದೆ. ನಾವೇಕೆ ಸ್ವಲ್ಪ ಜಾಗರೂಕರಾಗಿರಬಾರದು? ನಿಮ್ಮನ್ನು ನೀವು ಪ್ರಶ್ನಿಸಿಕೊಳ್ಳಿ. ಎಲ್ಲ ಉತ್ತರಗಳೂ ನಿಮ್ಮ ಕಡೆಯೇ ಬೆರಳುಮಾಡಿ ತೋರಿಸುತ್ತವೆ. ನಾನು ನಿಮಗೆ ತತ್ವಗಳನ್ನು ಮತ್ತು ಕಾರ್ಯದ ವಿವರಗಳನ್ನು ಕೊಡಬಲ್ಲೆ. ಅವುಗಳನ್ನು ಆಧರಿಸಿ ನೀವು ಕಾರ್ಯನಿರತರಾಗಬೇಕು ಮತ್ತು ನಿಮ್ಮ ಸಮಸ್ಯೆಗಳಿಗೆ ನೀವೇ ಪರಿಹಾರಗಳನ್ನು ಕಂಡುಕೊಳ್ಳಬೇಕು.

ದೀರ್ಘಕಾಲದವರೆಗೆ ಧ್ಯಾನ ಮಾಡಿದ ಮೇಲೆ ಎಲ್ಲೋ ಇರುವಂತೆ ಭಾಸವಾಗುವುದು ಸಹಜ. ಅಂಥ ಸಮಯಗಳಲ್ಲಿ ನೀವು ಉನ್ನತ ಹಂತಗಳ ಸೌಂದರ್ಯವನ್ನು ಅನುಭವಿಸುತ್ತಿರುತ್ತೀರಿ. ಆ ಅನುಭವದ ನಂತರ ನಾನಾ ಬಗೆಯ ಹಗರಣಗಳ ಈ ಪ್ರಪಂಚದೊಡನೆ ಮತ್ತೆ ಶ್ರುತಿಗೊಳಿಸಿಕೊಳ್ಳುವುದು ಸುಲಭವಲ್ಲ. ಆದ್ದರಿಂದ ಧ್ಯಾನದ ನಂತರ ಕನಿಷ್ಠ 5 ನಿಮಿಷಗಳ ಕಾಲ ಶವಾಸನ ಸೂಕ್ತ. ನಿಮಗೆ ಸಮಯವಿದ್ದರೆ, ಬಲವಂತದ ಪ್ರಯತ್ನ ಹಾಕದೆ, ಅದೇ ಸ್ಥಿತಿಯಲ್ಲಿ ಹೆಚ್ಚು ಕಾಲ ಉಳಿಯಿರಿ, ಅಥವಾ ನಿದ್ದೆಮಾಡಿ. ನಿಮಗೆ ಅದ್ಭುತ ಅನುಭವಗಳು ಮತ್ತು ರೋಮಾಂಚಕ ದರ್ಶನಗಳು ಉಂಟಾಗುತ್ತವೆ. ಈ ಭಾಗವನ್ನು ಸವಿಯಿರಿ.

ಒಬ್ಬ ವ್ಯಕ್ತಿ 'ನಾನು ದೇವರನ್ನು ಪ್ರಾರ್ಥಿಸಿದರೆ ಕಾಯಿಲೆ ಬೀಳುತ್ತೇನೆ, ದೇವಸ್ಥಾನಕ್ಕೆ ಹೋದರೆ ತಲೆನೋವು ಬರುತ್ತದೆ, ಯಾವುದಾದರು ಶ್ಲೋಕವನ್ನು ಹೇಳಿಕೊಂಡರೆ ಕಾಯಿಲೆಗೆ ಗುರಿಯಾಗುತ್ತೇನೆ' ಎಂದು ಮೇಲ್ ಕಳುಹಿಸಿದರು. ಅವರು ಒಂದು ನಕಾರ–ಶಕ್ತಿಯ ಹಿಡಿತಕ್ಕೆ ಒಳಗಾಗಿದ್ದಾರೆ. ನಾನು ಅವರಿಗೆ ಒಂದು ಸರಳ ತಂತ್ರವನ್ನು ಅಭ್ಯಾಸ ಮಾಡುವಂತೆ ಬರೆಯ ಬಯಸುತ್ತೇನೆ: 'ಬೆಳಕಿನ ಬಗ್ಗೆ ಆಲೋಚಿಸಿ, ನಿಮ್ಮಲ್ಲಿ ಬೆಳಕನ್ನು ಹೊಂದಿರಿ.' ಆಗ ನಕಾರ–ಶಕ್ತಿಗೆ ಅವರನ್ನು ಪ್ರವೇಶಿಸಲಾಗುವುದಿಲ್ಲ. ಅವರು ನನ್ನನ್ನು ಭೇಟಿ ಮಾಡಿದ ಪಕ್ಷದಲ್ಲಿ, ನಾನು ಸಹಾಯ ಮಾಡಬಹುದು.

ಶೂನ್ಯ ಮಾಸದ ಅವಧಿಯಲ್ಲಿ ಸಪ್ತಋಷಿಗಳ ಬದಲಿಗೆ ಬಂದಿದ್ದ ಹೊಸ ಋಷಿಗಳ ತಂಡ, ಒಂದು ಹೊಸ ಸ್ಥಳಾವಕಾಶವನ್ನು ಸೃಷ್ಟಿಸಿದ್ದಾರೆ. ಇದರಲ್ಲಿ ಅವರು ಫೋಟಾನ್‌ಬೆಲ್ಟ್, 2012ನೇ ವರ್ಷ, ಬೆಳಕಿನ ಶರೀರಗಳು ಮತ್ತು ಹೊಸಯುಗ ಇತ್ಯಾದಿಗಳ ಬಗ್ಗೆ ಹೊಸ ಜ್ಞಾನವನ್ನು ಹುದುಗಿಸಿಟ್ಟಿದ್ದಾರೆ. ಅವು ಹೊಸ ವೇದಗಳು. ಈ ಸ್ಥಳಾವಕಾಶವನ್ನು ಪ್ರವೇಶಿಸಿ, ಜ್ಞಾನವನ್ನು ಪಡೆಯಲು ಅವರು ತಂತ್ರಗಳನ್ನು ಕೊಡುತ್ತಾರೆ.

ಲೈಟ್ ಚಾನಲಿಂಗ್ ಮಾಡುತ್ತಿರುವ ಕಾರ್ಯಕರ್ತರು ಈ ಭೂಮಿಯಲ್ಲೇ ಅತ್ಯಂತ ನಿಸ್ವಾರ್ಥ ಜನರು. ಕಳೆದ ಬಾರಿ ನಾನು ಅವರಿಗೆ ಯಾವ ಅನುಕೂಲವನ್ನು ಮಾಡಲಾಗದೆ ಇದ್ದುದಕ್ಕೆ ವಿಷಾದವನ್ನು ತಿಳಿಸಿದ್ದೆ. ಅದಕ್ಕೆ ಪ್ರತಿಯಾಗಿ ಬೇಸರ ಪಟ್ಟುಕೊಳ್ಳಬಾರದೆಂದು ಅನೇಕರು ಹೃದಯಸ್ಪರ್ಶಿ ಪತ್ರಗಳನ್ನು ಕಳುಹಿಸಿದ್ದಾರೆ. ಇಂಥ ಜನರು ನನ್ನ ಸುತ್ತ ಇರುವುದು ನನಗೆ ಬಹಳ ಸಂತೋಷ ತಂದಿದೆ. ಇದು ನನ್ನ ಜೀವನವನ್ನು ಸಾರ್ಥಕಗೊಳಿಸಿದೆ.

09–01–2011

ರಾ ಗ್ರೂಪ್‌ನಲ್ಲಿರುವವರು, ಅದರಲ್ಲಿಯೇ ಉಳಿಯಬೇಕಾದರೆ ಮೂರು ಘಂಟೆಗಳ ಕಾಲ ಧ್ಯಾನ ಮಾಡಬೇಕು. ಇತರರು ಮೂರು ಘಂಟೆಗಳ ಕಾಲ ಧ್ಯಾನ ಮಾಡಬೇಕಾಗಿಲ್ಲ. ನೀವು ಸಕಾರಾತ್ಮಕರಾಗಲು ಸಾಧ್ಯವಾದರೆ ಮೂರು ಘಂಟೆ ಧ್ಯಾನ ಮಾಡುವ ಅಗತ್ಯವಿಲ್ಲ. ಭಾವೋದ್ವೇಗಗಳನ್ನು ಮತ್ತು ಆಲೋಚನೆಗಳನ್ನು ಸಕಾರಾತ್ಮಕ–ಗೊಳಿಸುವುದು ಅಷ್ಟು ಮುಖ್ಯ. ಅಗತ್ಯವಿದ್ದಷ್ಟು ಧ್ಯಾನ ಮಾಡಿ ಆದರೆ ಎಲ್ಲ ಹಂತಗಳಲ್ಲಿ ಖಚಿತವಾಗಿ ಸಕಾರಾತ್ಮಕರಾಗಿರಿ.

ಧ್ಯಾನದ ಸಮಯದಲ್ಲಿ ನಮಗೆ ಅನುಭವಗಳು, ದರ್ಶನಗಳು ಕಡಿಮೆಯಾಗಿ, ನಾವು ಹೆಚ್ಚು ಶೂನ್ಯತೆಯನ್ನು ಗಮನಿಸಿದರೆ, ನಾವು ನಿಜವಾಗಿ ಪ್ರಗತಿ ಸಾಧಿಸುತ್ತಿರುತ್ತೇವೆ. ಆಗ ನಮ್ಮ ಜಾಗೃತಿ, ಶರೀರ ವ್ಯವಸ್ಥೆಯನ್ನು ಮೀರಿ ಹೋಗಿರುತ್ತದೆ.

ಕೆಲವು ಸಲ ಜನರು ಧ್ಯಾನ ಮಾಡುವಾಗ ಅಥವಾ ಬಸ್ಸಿನಲ್ಲಿ ಪ್ರಯಾಣಿಸುತ್ತ ಯಾವುದಾದರೊಂದು ತಂತ್ರ ಅಭ್ಯಾಸ ಮಾಡುತ್ತಿರುವಾಗ ತಮ್ಮ ಸುತ್ತ ಇರುವ ಗದ್ದಲದ ಬಗ್ಗೆ ದೂರುತ್ತಾರೆ. ನಾವು ಗೊಣಗುವುದನ್ನು ನಿಲ್ಲಿಸಬೇಕು. ತಂತ್ರದ ಬಗ್ಗೆ ಕೇಂದ್ರೀಕರಿಸಿ; ನೀವು ಆ ಗದ್ದಲ ಮರೆಯಾಗುವುದನ್ನು ಗಮನಿಸುವಿರಿ. ಅದು ನಮಗೆ ಅಡ್ಡಿಯಾಗುವುದಿಲ್ಲ.

ಕೆಲವರು ಹೇಳುತ್ತಾರೆ: 'ನಾನು ಒಂದು ಸ್ಥಳಕ್ಕೆ ಹೋದೆ. ಅಲ್ಲಿ ಧ್ಯಾನ ಮಾಡಲು ಪ್ರಯತ್ನಿಸಿದೆ. ಆದರೆ ಸಾಧ್ಯವಾಗಲಿಲ್ಲ. ಅಲ್ಲಿ ಕಂಪನಗಳು ಚೆನ್ನಾಗಿರಲಿಲ್ಲ.' ಅದು ನಿಜವಿರಬಹುದು. ಆದರೂ ಆ ಸ್ಥಳದಲ್ಲಿಯೇ ಕುಳಿತು ಧ್ಯಾನ ಮಾಡಿ. ನೀವು ಧ್ಯಾನ ಮಾಡಿದಾಗ ಅಥವಾ ಬೆಳಕನ್ನು ಚಾನಲ್ ಮಾಡಿದಾಗ ನಕಾರಾತ್ಮಕ ಕಂಪನಗಳು ಮಾಯವಾಗುತ್ತವೆ. ಬೆಳಕು ಯಾವಾಗಲೂ ಶಕ್ತಿಯುತ, ನಕಾರಾತ್ಮಕತೆಗಿಂತ ಅಧಿಕ ಶಕ್ತಿಯುತವೆಂಬುದನ್ನು ನೆನಪಿನಲ್ಲಿಡಿ.

ನೀವು ಸಮಸ್ಯೆಗಳಿರುವ ಯಾರಾದರೂ ಒಬ್ಬ ವ್ಯಕ್ತಿಗೆ ಸಹಾಯ ಮಾಡಬೇಕೆನಿಸಿದರೆ, ಧ್ಯಾನಗಳಿಂದ ಆಗುವ ಲಾಭಗಳು ಮತ್ತು ಪ್ರಯೋಜನಗಳನ್ನು ತಿಳಿಸಿ, ಧ್ಯಾನ ಮಾಡಬೇಕೆಂದು ಹೇಳಿ. ಇದು ನಾವು ಮಾಡುವ ಅತ್ಯುತ್ತಮ ಸಹಾಯವೆಂದು ನಾನು ತಿಳಿದಿದ್ದೇನೆ.

ದೈನಂದಿನ ಜೀವನದಲ್ಲಿ ಒಂದು ಲಯವನ್ನು ನಿರ್ಮಿಸಿಕೊಳ್ಳಿ. ಊಟ, ನಿದ್ದೆ, ಓದು ಇತ್ಯಾದಿ ಯಾವುದೇ ಹವ್ಯಾಸದಲ್ಲಿ ಒಂದು ಲಯವಿರಲಿ. ನಮ್ಮ ದೇಹ–ಮನಸ್ಸು–ಬುದ್ಧಿ ವ್ಯವಸ್ಥೆಗೆ ಈ ಲಯ ಸಹಾಯ ಮಾಡುತ್ತದೆ. ನಿಮಗೆ ಇಷ್ಟವೆನಿಸಿದ ರೀತಿಯಲ್ಲಿ ಲಯವನ್ನು ಬೆಳೆಸಿಕೊಳ್ಳಿ. ಇಲ್ಲವಾದರೆ ಈ ವ್ಯವಸ್ಥೆ ಗೊಂದಲಕ್ಕೆ ಗುರಿಯಾಗುತ್ತದೆ. ನಾವು ನಮ್ಮ ಶರೀರ–ವ್ಯವಸ್ಥೆಗೆ ಸಹಾಯ ಮಾಡೋಣ.

ಒಬ್ಬ ವ್ಯಕ್ತಿ ಒಂದು ಸುಂದರವಾದ ಪತ್ರವನ್ನು ಬರೆದು, ನಾವು ಒಂದು ಡೆಸ್ಕ್–ಕ್ಯಾಲೆಂಡರನ್ನು ಪ್ರಿಂಟ್ ಮಾಡಬೇಕೆಂದು ಸಲಹೆ ನೀಡಿದರು. ನಾವು ಅಂಥ ಒಂದು ಪ್ರಯತ್ನಮಾಡಿ ತಪೋವನ, ಕುಂಡಲಿನಿ ಹಾಲ್ ಇತ್ಯಾದಿ ಫೋಟೋಗಳನ್ನೊಳಗೊಂಡ ಕ್ಯಾಲೆಂಡರನ್ನು ಪ್ರಿಂಟ್ ಮಾಡಿದ್ದೇವೆ.

ಒಬ್ಬ ವ್ಯಕ್ತಿ ಮಾನಸ ಕುಟುಂಬವನ್ನು ಒಂದು ತೋಟಕ್ಕೆ ಹೋಲಿಸಿ ತುಂಬಾ ಸುಂದರವಾದ ಮತ್ತು ಪ್ರೀತಿಯ ಪತ್ರವನ್ನು ಬರೆದಿದ್ದಾರೆ. ಆಕೆ ಕಾರ್ಯಕರ್ತರನ್ನು, ಅದರಲ್ಲಿಯೂ ಲೈಟ್ ಚಾನಲಿಂಗ್‌ಗಾಗಿ ಕೆಲಸ ಮಾಡುವವರನ್ನು ಅದ್ಭುತ ಕುಸುಮಗಳೆಂದು ಕರೆದಿದ್ದಾರೆ. ನನ್ನನ್ನು ಅತ್ಯುತ್ತಮ ತೋಟಗಾರ ಎಂದಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ನನ್ನ ಬಳಿ ಅತ್ಯಂತ ಸುಂದರವಾದ

# ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ತೋಟವಿದೆ. ಪ್ರಪಂಚದಲ್ಲಿಯೇ ಅತ್ಯುತ್ತಮವಾದ ಹೂವುಗಳು ಇಲ್ಲಿವೆ. ಇಲ್ಲಿ ಕಳೆಯಾಗಲಿ, ಮುಳ್ಳುಗಳಾಗಲಿ ಇಲ್ಲ, ಕೇವಲ ಹೂಗಳಿವೆ ಎಂಬುದನ್ನು ನೀವು ತಿಳಿಯಬೇಕು.

16–01–2011

ಒಬ್ಬ ವ್ಯಕ್ತಿ ಹೀಗೆ ಹೇಳಿದರು: "ಭೌತಿಕ ಮಟ್ಟದಲ್ಲಿ ಕಲಿಯುವುದು ಕೊನೆಯಲ್ಲಿ ಸಂಭವಿಸುತ್ತದೆ." ಇದು ನಿಜ. ಕೆಲವು ಸಲ ನಾವು ಸೂಕ್ಷ್ಮ ಮಟ್ಟದಲ್ಲಿ ವಿಷಯಗಳನ್ನು ಕಲಿಯುತ್ತೇವೆ ಮತ್ತು ಇದು ಅನೇಕ ಬಾರಿ ನಮಗೆ ತಿಳಿಯುವುದಿಲ್ಲ. ಬುದ್ಧಿಯ ಮಟ್ಟದಲ್ಲಿ ನೀವು ಸ್ವಲ್ಪ ಹೊಸ ಜ್ಞಾನ ಅಥವಾ ಆಲೋಚನೆ ಹೊಂದಿದ್ದರೂ ಅದು ಭೌತಿಕ ಅರಿವಿಗೆ ಬರುವ ಹೊತ್ತಿಗೆ ಅನೇಕ ಅಂಶಗಳು ಕಳೆದು ಹೋಗಿರುತ್ತವೆ ಅಥವಾ ಅವು ವಿಕೃತವಾಗಿರುತ್ತವೆ. ನೀವು ಏಕಾಂತದಲ್ಲಿ ಕುಳಿತು ಇದನ್ನು ಗಮನಿಸಬೇಕು.

ಅತ್ಯುನ್ನತ ಹಂತದಿಂದ ಜ್ಞಾನವನ್ನು ಸಂಗ್ರಹಿಸುವುದು ಸುಲಭವಲ್ಲ. ಹೊಸ ಋಷಿಗಳಿಂದ ಸೃಷ್ಟಿಯಾದ ಮಾನಸಿಕ–ಸ್ಥಳಾವಕಾಶ ವಿಶಿಷ್ಟವಾದುದು. ಉನ್ನತ ಹಂತದಿಂದ ಈ ಹಂತದಲ್ಲಿರುವ ಮಾನಸಿಕ–ಸ್ಥಳಾವಕಾಶಕ್ಕೆ ಹೊಸ ಜ್ಞಾನವನ್ನು ತರಲಾಗಿದೆ. ಆದ್ದರಿಂದ ಈ ಹೊಸ ಜ್ಞಾನ ನಮಗೆ ಸುಲಭವಾಗಿ ಲಭ್ಯವಿದೆ. ನಾವು ಈ ಮಾನಸಿಕ–ಸ್ಥಳಾವಕಾಶವನ್ನು ಹೊಕ್ಕು, ಅಲ್ಲಿರುವ ಜ್ಞಾನವನ್ನು ನಿಧಾನವಾಗಿ ಅರ್ಥಮಾಡಿಕೊಂಡು, ಕೆಳತರಬೇಕು. ಇದಕ್ಕೆ ಅನೇಕ ವರ್ಷಗಳಾಗಬಹುದು. 'ಶೂನ್ಯಮಾಸ'ದ ಅವಧಿಯಲ್ಲಿದ್ದ ಋಷಿಗಳು ನೀಡಿದ ಕಾಣಿಕೆ ಇದು.

ಕಾರ್ಖಾನೆಗಳು, ವಾಣಿಜ್ಯ ಸಂಘ ಸಂಸ್ಥೆಗಳು ಕೇವಲ ಹಣಗಳಿಸುವುದಕ್ಕಾಗಿ ಇವೆ. ಆದರೆ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಹಣವನ್ನು ಗಳಿಸುವುದಾಗಲಿ ಅಥವಾ ಹಣ ಮಾಡುವುದನ್ನಾಗಲಿ ನಿರೀಕ್ಷಿಸುವಂತಿಲ್ಲ, ಉದಾ: ದೇವಸ್ಥಾನ. ಹಣ ಮಾಡುವ ಸಾಧ್ಯತೆಗಳಿರುವೆಡೆ ಅಪ್ರಾಮಾಣಿಕ ಶಕ್ತಿಗಳು ಬಂದು ತಳವೂರಿಬಿಡುತ್ತವೆ. ಅದೊಂದು ವಾಣಿಜ್ಯ ಉದ್ದಿಮೆ ಆಗಿಬಿಡುತ್ತದೆ. ಉದಾಹರಣೆ: ಆರೋಗ್ಯವರ್ಧಕ ಉದ್ದಿಮೆ, ನಿವರ್ತನ ಉದ್ದಿಮೆ ಮತ್ತು ಧ್ಯಾನದ ಉದ್ದಿಮೆ. ಇವುಗಳ ಬಗ್ಗೆ ಎಚ್ಚರವಾಗಿರಿ. ಅನಗತ್ಯವಾಗಿ ಹಣ ಕಳೆದುಕೊಳ್ಳಬೇಡಿ.

ಮಹರ್ಷಿ ಪತಂಜಲಿಯ 'ಅಷ್ಟಾಂಗ ಯೋಗ'ಕ್ಕೆ ಒಂದು ಅಧ್ಯಾಯವನ್ನು ನಾವು ಸೇರಿಸಬಹುದು ಎಂದು ನನ್ನ ಗುರು ಹೇಳಿದ್ದರು. ನನ್ನ ಗುರು ಯಾವುದನ್ನೂ ಪೇಟೆಂಟ್ ಮಾಡಿರಲಿಲ್ಲ. ಋಷಿಗಳಿಂದ ಪಡೆದುದಕ್ಕೆಲ್ಲಾ ನಾವು ಪೇಟೆಂಟ್ ಮಾಡಲು ಸಾಧ್ಯವಿಲ್ಲ.

ಸಂಕ್ರಾಂತಿಯ ದಿನ ನಮ್ಮ ಋಷಿಗಳು ತಮ್ಮ ಒಂದು ತಿಂಗಳ ತಪಸ್ಸಿನಿಂದ ಹಿಂದಿರುಗಿ ಬಂದಿದ್ದಾರೆ. ಅವರ ಗೈರು ಹಾಜರಿಯಲ್ಲಿದ್ದ ಋಷಿಗಳ ತಂಡದಿಂದ ಅವರು ಅಧಿಕಾರ ಸ್ವೀಕರಿಸಿದರು. ಸಂಕ್ರಾಂತಿಯ ದಿನ ಬೆಳಿಗ್ಗೆ ಸೂರ್ಯೋದಯಕ್ಕೆ ಮೊದಲು, ಮಾನಸ ಸರೋವರದ ದಡದಲ್ಲಿ ಎಲ್ಲ ಋಷಿ–ಕಾರ್ಯಕರ್ತರು ಸೇರುತ್ತಾರೆ. ಸಾಮಾನ್ಯವಾಗಿ, ಋಷಿಗಳಿಂದ ಆಹ್ವಾನಿಸಲ್ಪಟ್ಟ ಬ್ರಹ್ಮದೇವನು ಕಾಣಿಸಿಕೊಳ್ಳುವನು ಮತ್ತು ಕ್ಷಣ ಮಾತ್ರದಲ್ಲಿ ಕೆಲವು ಋಷಿಗಳ ಕೊರಳಲ್ಲಿ ಹೂವಿನ ಹಾರಗಳು ಕಾಣಿಸಿಕೊಳ್ಳುತ್ತವೆ. ಆ ಋಷಿ–ಕಾರ್ಯಕರ್ತರು ನಿವೃತ್ತರಾದರು ಎಂಬುದನ್ನು ಅದು ಸೂಚಿಸುತ್ತದೆ. ಋಷಿಗಳೆಲ್ಲ ಬಹಳ ಶಿಸ್ತಿನವರು, ನಾವು ಅವರಡಿಯಲ್ಲಿ ಕೆಲಸ ಮಾಡುತ್ತಿದ್ದೇವೆ ಮತ್ತು ಕಲಿಯುತ್ತಿದ್ದೇವೆ. ನಾವು ಅವರ ಮಟ್ಟಕ್ಕೆ ಏರಬೇಕು, ನಮ್ಮನ್ನು ತೆಗೆದು ಹಾಕುತ್ತಾರೆ ಎಂಬ ಭಯದಿಂದ ಅಲ್ಲ ಆದರೆ ನಮ್ಮ ಸ್ವಂತ ಇಚ್ಛೆಯಿಂದ.

ನಮ್ಮ ಲೈಟ್ ಚಾನಲಿಂಗ್ ಜನ 'ಧೀರ ದೇವತೆಗಳು!' ಅವರು 10 ಲಕ್ಷ ವಿದ್ಯಾರ್ಥಿಗಳಿಂದ ಲೈಟ್ ಚಾನಲ್ ಮಾಡಿಸುವ ಗುರಿಯನ್ನು ಮುಟ್ಟಿದ್ದಾರೆ. ಇದೊಂದು ದಾಖಲೆ. ಇದು ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿದೆ. ನಾವು ನಮ್ಮದೇ ಆದ ರೀತಿಯಲ್ಲಿ ಅವರಿಗೆ ಕಾಣಿಕೆಗಳನ್ನು ನೀಡುತ್ತೇವೆ.

23–01–2011

ಫೋಟಾನ್ ಬೆಲ್ಟ್ ಅತ್ಯಂತ ಮುಖ್ಯವಾದ ಚೈತನ್ಯವಲಯ. ಅದು ಅಗಾಧ ಬದಲಾವಣೆಗಳನ್ನು ತರುತ್ತದೆ. ನಮ್ಮೊಳಗೆ ಮತ್ತು ನಮ್ಮ ಕುಟುಂಬದೊಳಗೆ ಅನೇಕ ಬದಲಾವಣೆಗಳನ್ನು ಉಂಟುಮಾಡುವುದರ ಬಗ್ಗೆ ಹೆಚ್ಚು ಜಾಗರೂಕರಾಗಿರೋಣ. ಜನರು ಸುಖವಾಗಿರಬಹುದಾದ ಕಡೆ ವೈಮನಸ್ಯಗಳಿವೆ. ಆದರೆ ಕೆಲವರ ವಿಷಯದಲ್ಲಿ ವೈಮನಸ್ಯ ಖಚಿತವೆಂದು ತೋರುವೆಡೆ, ಅವರು ಸರಿಯಾದುದನ್ನು ಆಯ್ಕೆ ಮಾಡಿಕೊಂಡಿರುವುದರಿಂದ ಸಂತೋಷವಾಗಿ ಬಾಳುತ್ತಾರೆ.

ಒಂದು ರೀತಿಯ ಶುದ್ಧೀಕರಣ ಕಂಡುಬರುತ್ತಿದೆ. ಪರಿಸರದ ಬದಲಾವಣೆಗಳು ಭರದಿಂದ ಸಂಭವಿಸುತ್ತಿವೆ. ಪ್ರಪಂಚದ ಕೆಲವು ಭಾಗಗಳಲ್ಲಿ ಪ್ರತಿದಿನವೂ ಭಯೋತ್ಪಾದನೆಯಿಂದ ಹತ್ಯೆಗಳು ಆಗುತ್ತಿದ್ದರೂ ಉಳಿದೆಡೆ ಹೆಚ್ಚು ಶಾಂತಿಯಿದೆ. ಯುದ್ಧ ಸಂಭವಿಸುವುದಿಲ್ಲ ಎಂಬ ಭರವಸೆಯನ್ನು ನಾನು ನಿಮಗೆ ಕೊಡುತ್ತೇನೆ.

ಅನೇಕರಿಗೆ ತಾವು ಆತ್ಮಗಳು, ಬೆಳಕಿನ ಕಣಗಳು ಎಂಬುದು ತಿಳಿದಿಲ್ಲ. ಇದು ಅಜ್ಞಾನ. ಸಾವಿನ ಬಗ್ಗೆಯೂ ಅಜ್ಞಾನವಿದೆ. ನಾವು ಸಾವೇ ಅಂತ್ಯ ಎಂದು ತಿಳಿದಿರಬಹುದು. ಆದರೆ ಸಾವು ಒಂದು ತೆರೆದ ಬಾಗಿಲು. ಸಾವಿನ ನಂತರವೂ ನಾವು ಬದುಕಿ ಉಳಿಯುತ್ತೇವೆ ಮತ್ತು ಸಾವಿನ ನಂತರ ಒಂದು ಉಜ್ವಲವಾದ ಜೀವನ ಇದೆ. ಸೃಷ್ಟಿಯ ಬಗ್ಗೆ, ದೇವರ ಬಗ್ಗೆ, ಅಧ್ಯಾತ್ಮದ ಬಗ್ಗೆ ಅಜ್ಞಾನವಿದೆ. ಇದೇ ರೀತಿ ಧ್ಯಾನದ ಬಗ್ಗೆ, ಅಧ್ಯಾತ್ಮದ ನಿಯಮಗಳ ಬಗ್ಗೆ, ಕರ್ಮದ ನಿಯಮಗಳ ಬಗ್ಗೆ ಕೂಡಾ ಅಜ್ಞಾನವಿದೆ.

ಪ್ರತಿಯೊಂದೂ ಜೀವಂತವಾಗಿದೆ. ಒಂದು ಒಣಗಿದ ಎಲೆ, ಬಾಡಿದ ಹೂವು ಅಥವಾ ಒಂದು ತ್ಯಜಿಸಿದ ವಾಹನ ಎಲ್ಲವೂ ಜೀವಂತವಾಗಿವೆ. ಅವು ಚಲಿಸದೇ ಇರಬಹುದು ಆದರೆ ಅವು ಭಿನ್ನ ರೀತಿಯಲ್ಲಿ ಜೀವಂತವಾಗಿವೆ. ಜೈವಿಕಶಕ್ತಿಯನ್ನು ಮಾತ್ರ ಹಿಂಪಡೆಯಲಾಗಿರುತ್ತದೆ, ಆದರೆ ಅವುಗಳಲ್ಲಿ ಪ್ರಜ್ಞೆ ಹಾಗೆಯೇ ಇರುತ್ತದೆ. ಆದ್ದರಿಂದ ನಾವು ಪ್ರತಿಯೊಂದರೊಡನೆ ಸಂಪರ್ಕಿಸಬಹುದು. ನೀವು ಏಕಾಂತವಾಗಿದ್ದಾಗ ಇದೆಲ್ಲದರ ಬಗ್ಗೆ ಚಿಂತನೆ ಮಾಡಬೇಕು.

ಧ್ಯಾನ ಮಾಡಿದ ನಂತರ, ಸ್ವಲ್ಪ ಕಾಲ ನಾವು ಧ್ಯಾನದ ಸಮಯದಲ್ಲಿ ಶೂನ್ಯತೆಯನ್ನು ಅನುಭವಿಸುತ್ತೇವೆ. ನಂತರ ಒಂದು ರೀತಿಯ ವೈಶಾಲ್ಯವನ್ನು ಅನುಭವಿಸುತ್ತೇವೆ ಮತ್ತು ಶೂನ್ಯತೆ ಮಾಯವಾಗುತ್ತದೆ. ಇದು ಸಮಾಧಿಯ ಆರಂಭ. ಜಾಗೃತಿ ಸ್ಪಷ್ಟವಾಗುತ್ತದೆ, ಕ್ರಮೇಣ ಅರಳುತ್ತದೆ ಮತ್ತು ಅಂತಿಮವಾಗಿ ಎಲ್ಲ ವಿಷಯಗಳ ಅರಿವುಂಟಾಗುತ್ತದೆ. ಈ ಅನುಭವಗಳನ್ನು ವಿವರಿಸಲು ಆಗುವುದಿಲ್ಲ. ಈ ಸ್ಥಿತಿಗಳ ನಂತರ ಒಂದು ಬಗೆಯ ಸಾನ್ನಿಧ್ಯ – ದೇವರು ಪ್ರೀತಿಯ ರೂಪದಲ್ಲಿ, ಬೆಳಕಿನ ರೂಪದಲ್ಲಿಇರುವುದು ನಮಗೆ ಅರಿವಾಗುತ್ತದೆ. ಈ ಸಾನ್ನಿಧ್ಯ, ಶಾಂತಿ ಮತ್ತು ಎಲ್ಲ ಸಕಾರಾತ್ಮಕತೆಯನ್ನು ಒಳಗೊಂಡಿರುತ್ತದೆ. ಈ ಸಾನ್ನಿಧ್ಯ, ಅತ್ಯಂತ ವಿಶಾಲ, ಅನಿಯಮಿತ, ಸಂಪೂರ್ಣ, ಅಭಿನ್ನವಾದ ಏಕರೂಪವೆಂಬುದನ್ನು ಅರಿಯುತ್ತೇವೆ. ನಾವು ಪರಮೋನ್ನತವಾದ ಏಕತೆಯನ್ನು ಅನುಭವಿಸುತ್ತೇವೆ. ಇವು ಅನೇಕ ಹಂತಗಳಲ್ಲಿ ಘಟಿಸುತ್ತವೆ. ಈ ರೀತಿಯ ಅನುಭವವಾದ ಮೇಲೆ ಕೂಡಾ, ಇನ್ನೂ ಹೆಚ್ಚಿನದು ಇರುತ್ತವೆ, ಆದರೆ ಈ ಹಂತದಲ್ಲಿ ಅವು ನಮಗೆ ತಿಳಿಯುವುದಿಲ್ಲ. ಇದು ಋಷಿಗಳು ಈಗ ನೀಡಿರುವ ಹೊಸ ಜ್ಞಾನ. ಇವುಗಳ ಬಗ್ಗೆ ಚಿಂತನೆ ಮಾಡಿ. ಚಿಂತನೆ, ನಮಗೆ ಕೆಲವು ಆಧ್ಯಾತ್ಮಿಕ ಪ್ರಯೋಜನಗಳನ್ನು ತರುತ್ತದೆ. ಇವುಗಳನ್ನು ಅನುಭವಿಸಿದ ನಂತರವೂ ಋಷಿಗಳು ಮತ್ತು ಕೆಲವು ಮಹಾಗುರುಗಳು, ದೇವರ ಮೇಲಿರುವ ಹೆಚ್ಚಿನ ಪ್ರೀತಿಯ ಕಾರಣ, ಮತ್ತೆ ಬರಲು ಮತ್ತು ಕೆಲಸ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರ 'ಉಪನ್ಯಾಸ–ಪ್ರವಾಸ'ದ ವರದಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಸುಧಾಕರ್**

ಮುಂಬೈ, ಪೂನಾ ಮತ್ತು ನಾಗಪುರಗಳಲ್ಲಿ ಈ ವರ್ಷದ ಜನವರಿ 29 ಮತ್ತು 30ರಂದು ಗುರೂಜಿಯವರ 'ಉಪನ್ಯಾಸ–ಪ್ರವಾಸ'ವನ್ನು ಏರ್ಪಡಿಸಲಾಗಿತ್ತು. ಅಲ್ಲಿಯ ಕಾರ್ಯಕರ್ತರು, ಉಪನ್ಯಾಸಗಳ ಸ್ಥಳ, ಅತಿಥಿಗಳ ಪಟ್ಟಿ ಇತ್ಯಾದಿಗಳ ಸಿದ್ಧತೆಗಳನ್ನು ಒಂದು ತಿಂಗಳ ಹಿಂದೆಯೇ ಪ್ರಾರಂಭಿಸಿದ್ದರು. ಕಾರ್ಯಕ್ರಮಕ್ಕೆ ಕಾದಿರಿಸಿಕೊಂಡವರ ಸಂಖ್ಯೆ, ಅಲ್ಲಿಯ ಸ್ಥಳಾವಕಾಶವನ್ನು ಮೀರಿದೆ ಎಂದು ನಮಗೆ ತಿಳಿಸಿದ್ದರು. ನಂತರ ಮುಂಬೈ ಮತ್ತು ಪುಣೆಯಲ್ಲಿ ಇದನ್ನು ನಾವು ಕಣ್ಣಾರೆ ಕಂಡೆವು.

ಮುಂಜಾವಿಗೂ ಮೊದಲು ನಮ್ಮ ಪ್ರಯಾಣ ಪ್ರಾರಂಭವಾಯಿತು. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಹೋಗುತ್ತಿದ್ದಾಗ, ಗುರೂಜಿಯವರು, ತಮ್ಮನ್ನು ಭೇಟಿಯಾಗುವ ಪ್ರತಿಯೊಬ್ಬರಿಗೂ ಪ್ರಸಾರಮಾಡುವುದಕ್ಕಾಗಿ ಒಂದು ವಿಶೇಷವಾದ ದೈವೀಶಕ್ತಿಯನ್ನು ಮೂರು ದಿನಗಳಿಂದಲೂ ಅವರು ಶೇಖರಿಸುತ್ತಿರುವುದಾಗಿ ತಿಳಿಸಿದರು. ತಾವು ಅಲ್ಲಿ ಆಡುವ ಮಾತುಗಳ ಹಿಂದಿರುವ ಚೈತನ್ಯಗಳು ಕೂಡ ಅತಿ ಮುಖ್ಯ ಎಂದು ಒತ್ತಿಹೇಳಿದರು.

ಬೆಂಗಳೂರಿನಲ್ಲಿರುವಂಥ ಹವಾಮಾನದೊಂದಿಗೆ ಮುಂಬೈ ನಮ್ಮನ್ನು ಸ್ವಾಗತಿಸಿತು. ಆತ್ಮೀಯ ಸ್ವಾಗತ ಪಡೆದ ನಾವು, ನೇರವಾಗಿ ಸುಸಜ್ಜಿತವಾಗಿ ಸಿದ್ಧಗೊಂಡಿದ್ದ ಕಾರ್ಯಕ್ರಮದ ಸ್ಥಳಕ್ಕೆ ಹೋದೆವು. ಚೇತೋಹಾರಿಯಾದ ಕಾಫಿಯನ್ನು ಸೇವಿಸಿದ ನಂತರ, ಹೂವಿನಿಂದ ಅಲಂಕೃತಗೊಂಡಿದ್ದ ಸುಂದರವಾದ ವೇದಿಕೆಯನ್ನು ಗುರೂಜಿಯವರು ಹತ್ತಿದರು. ಆಧ್ಯಾತ್ಮಿಕತೆಯನ್ನು ಅರಸಿಬಂದ ಅಸಂಖ್ಯಾತ ಸಭಿಕರು ಭಕ್ತಿಪೂರ್ವಕವಾಗಿ, ತೆರೆದ ಹೃದಯಗಳಿಂದ ಕುಳಿತಿದ್ದರು. ಬೆಳಕಿನ ಸಾಗರವನ್ನು ಅನುಭವಿಸುವ ಅಭ್ಯಾಸದೊಂದಿಗೆ ಸಭೆ ಪ್ರಾರಂಭವಾಯಿತು. ಗುರೂಜಿಯವರ ಉಪನ್ಯಾಸದುದ್ದಕ್ಕೂ ನಿಶ್ಶಬ್ದತೆ ರಾರಾಜಿಸುತ್ತಿತ್ತು. ಪ್ರಶ್ನೆಗಳನ್ನು ಬರವಣಿಗೆಯ ರೂಪದಲ್ಲಿ ಮುಂಚಿತವಾಗಿಯೇ ತಲುಪಿಸಲಾಗಿತ್ತು. ಗುರೂಜಿಯವರು ಪ್ರತಿಯೊಂದು ಪ್ರಶ್ನೆಯನ್ನೂ ಗಟ್ಟಿಯಾಗಿ ಓದಿ ನಂತರ ಉತ್ತರಿಸಿದರು. ನಂತರದ ಕಾರ್ಯಕ್ರಮ, ಬೆಳಕಿನ ಮಾಸ್ಟರ್, ಗುರೂಜಿಯವರಿಂದ ಪಡೆಯುವ ಆಶೀರ್ವಾದಕ್ಕಷ್ಟೇ ಸೀಮಿತವಾಗಿರಲಿಲ್ಲ; ಆಶೀರ್ವಾದದ ಸಮಯದಲ್ಲಿ ಪ್ರತಿಯೊಬ್ಬರೊಂದಿಗೂ ಕೆಲವು ಕ್ಷಣ ಮಾತನಾಡಲು ಬಯಸುವುದಾಗಿ ಗುರೂಜಿಯವರು ಪ್ರಕಟಿಸಿದರು.

ಪೂನಾ ನಮ್ಮನ್ನು ಕೈ ಬೀಸಿ ಕರೆಯುತ್ತಿತ್ತು. ಆದ್ದರಿಂದ ಆ ಸಾಂಸ್ಕೃತಿಕ ರಾಜಧಾನಿಯನ್ನು ಬೇಗ ಸೇರಲೆಂದು ಊಟವಾದ ತಕ್ಷಣವೇ ಎಕ್ಸ್‌ಪ್ರೆಸ್ ದಾರಿಯ ಮುಖಾಂತರ ಹೊರಟೆವು. ಬೆಟ್ಟದ ಸಾಲುಗಳು, ಕಣ್ಸೆಳೆಯುವ ಮನಮೋಹಕ ವಿಹಂಗಮ ನೋಟ ಮತ್ತು ಸುರಂಗಗಳನ್ನು ದಾಟುತ್ತಾ ನಮ್ಮ ಒಬ್ಬ ಸಾಧಕರ ಮನೆಯನ್ನು ತಲುಪಿದೆವು. ಅಲ್ಲಿ ಉಪಾಹಾರದ ಜೊತೆಗೆ ಅನಿರೀಕ್ಷಿತವಾಗಿ ಏಗುರೂಜಿ ಕಾರ್ಯಕ್ರಮ ಜರುಗಿ, ಕಾರ್ಯಕ್ರಮ ನಡೆಯುವ ಸ್ಥಳ ತಲುಪಲು ತಕ್ಕಷ್ಟು ಸಮಯ ಮಾತ್ರ ಉಳಿದಿತ್ತು. ಕಾರಿನಿಂದ ಇಳಿಯುತ್ತಿದ್ದಂತೆಯೇ ಜನರು ಗುರೂಜಿಯವರನ್ನು ಮುತ್ತಿಕೊಂಡರು, ಆ ಉತ್ಸಾಹೀ ವಿದ್ಯಾರ್ಥಿಗಳ ಮಧ್ಯೆ ಗುರೂಜಿಯವರನ್ನು ನಾವು ನೋಡುವುದಕ್ಕೂ ಆಗಲಿಲ್ಲ. ಉಪನ್ಯಾಸ ಮತ್ತು ಪ್ರಶ್ನೋತ್ತರಗಳ ನಂತರ ವೈಯಕ್ತಿಕವಾಗಿ ಆಶೀರ್ವಾದ ಪಡೆದುಕೊಳ್ಳುವ ಕಾರ್ಯಕ್ರಮ ನಿಗದಿತ ಸಮಯವನ್ನು ದಾಟಿತು.

ನಾವು ರಾತ್ರಿ ತಂಗಿದ ಹೋಟೆಲ್‌ನಲ್ಲಿ ಕೆಲವು ವಿದ್ಯಾರ್ಥಿಗಳನ್ನು ಉತ್ಕಟ ಮಾರ್ಗದರ್ಶನಕ್ಕಾಗಿ ಗುರೂಜಿಯವರು ಭೇಟಿ ಮಾಡಿದರು. ಹಾಲ್‌ನಿಂದ ಬರುವಾಗ ಕೂಡ ವಿದ್ಯಾರ್ಥಿಗಳು ಜೊತೆಯಲ್ಲಿದ್ದರು. ರಾತ್ರಿ ಊಟ ಮುಗಿಸಿದಾಗ 11 ಗಂಟೆಯಾಗಿತ್ತು. ನಾವು ಒಂದೇ ಸಮನೆ ಹತ್ತೊಂಭತ್ತು ಘಂಟೆಗಳನ್ನು ಉಪನ್ಯಾಸಗಳಲ್ಲಿ, ಓಡಾಟಗಳಲ್ಲಿ, ವಿಮಾನ ಪ್ರಯಾಣದಲ್ಲಿ ಕಳೆದಿದ್ದೆವೆಂಬುದು ಆಗ ನಮ್ಮ ಗಮನಕ್ಕೆ ಬಂದಿತು. ವಿಶ್ರಾಂತಿಗೆ ಸಮಯವಿಲ್ಲದಿದ್ದರೂ ಗುರೂಜಿಯವರು ಆಯಾಸಗೊಂಡಂತೆ ಕಾಣಿಸಲಿಲ್ಲ.

ನಾಗಪುರ ಮುಂಜಾವಿನಲ್ಲಿ ನಮ್ಮನ್ನು ಸ್ವಾಗತಿಸಿತು. ಆತ್ಮೀಯ ಸ್ವಾಗತದ ನಂತರ ಉಪಹಾರಕ್ಕೆ ಮೊದಲು ಸೊಗಸಾದ ಎರಡು ಘಂಟೆಗಳ ವಿಶ್ರಾಂತಿಯನ್ನು ಪಡೆದುಕೊಂಡೆವು. ಅಲ್ಲಿ ಉಪನ್ಯಾಸ ಕಾರ್ಯಕ್ರಮ ಒಂದು ದೇವಸ್ಥಾನ ಸಮುಚ್ಛಯದಲ್ಲಿತ್ತು. ಕಾರ್ಯಕ್ರಮವನ್ನು ಪ್ರಾರಂಭಿಸುವ ಮೊದಲು ಗುರೂಜಿಯವರು ದೇವಾಲಯಕ್ಕೆ ಹೋಗಿಬಂದರು.

ಪ್ರತಿಯೊಂದು ಸ್ಥಳದಲ್ಲೂ ವ್ಯಕ್ತಿಗತ ಆಶೀರ್ವಾದಕ್ಕಾಗಿ ತುಂಬಿತುಳುಕುತ್ತಿದ್ದ ಸಾಧಕರು ಗುರೂಜಿಯವರ ಮುಂದೆ ತಮ್ಮ ಅಂತರಂಗವನ್ನೇ ಬಿಚ್ಚಿಡುತ್ತಿದ್ದರು. ಅದಕ್ಕೆ ಪ್ರತಿಯಾಗಿ ಗುರೂಜಿಯವರು, ಆ ಜನರಿಗೆ ಎಲ್ಲ ರೀತಿಯಲ್ಲೂ ಸಹಾಯ ಮಾಡಬೇಕೆಂಬ ಏಕೈಕ ಉದ್ದೇಶದಿಂದ ತಮ್ಮೊಂದಿಗೆ ಕೊಂಡೊಯ್ದಿದ್ದ ವಿಶೇಷ ಚೈತನ್ಯಗಳಿಂದ ಅವರನ್ನು ತುಂಬುತ್ತಿದ್ದರು. ಗುರೂಜಿಯವರು ಸುಮಾರು ಒಂದು ಸಾವಿರ ಸಾಧಕರನ್ನು ಆಶೀರ್ವದಿಸಿದ್ದರೂ, ಆ ವಿಶೇಷ ಚೈತನ್ಯಗಳು ತಮ್ಮಲ್ಲಿ ಇನ್ನೂ ಉಳಿದಿರುವುದಾಗಿ ನಂತರ ನಮಗೆ ತಿಳಿಸಿದರು.

ಗುರೂಜಿಯವರ ಉಪನ್ಯಾಸಗಳು ಬೆಳಕಿನ ಯುಗವನ್ನು ಸಾರಿದವು. ■

# ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ದೇವರು ಮಾಯೆಯನ್ನು ಸೃಷ್ಟಿಸಿದ್ದು ಏಕೆ?**

ಉ: ಇಲ್ಲಿಯ ಜೀವನವನ್ನು ಮತ್ತು ಸೃಷ್ಟಿಯ ವೈವಿಧ್ಯತೆಯನ್ನು ನಾವು ಅನುಭವಿಸುವುದಕ್ಕೆ ಸಹಾಯವಮಾಡಲು ದೇವರು ಮಾಯೆಯನ್ನು ಸೃಷ್ಟಿಸಿದನು. ಮಾಯೆ ಒಂದು ವರ. ಮಾಯೆಯಿಲ್ಲದಿದ್ದರೆ ನಾವು ಎಲ್ಲದರಲ್ಲೂ ಬೆಳಕನ್ನೇ ಕಾಣುತ್ತೇವೆ.

**ಪ್ರ: ನಮ್ಮ ಆಧ್ಯಾತ್ಮಿಕ ಬದುಕು ಯಾವಾಗ ಆರಂಭವಾಗುತ್ತದೆ ಎಂದು ಹೇಳಬಹುದು?**

ಉ: ನಮ್ಮ ಆಧ್ಯಾತ್ಮಿಕ ಬದುಕು ನಾವು ಪ್ರೀತಿಯನ್ನು ವ್ಯಕ್ತಗೊಳಿಸಲು ಆರಂಭಿಸಿದಾಗ ಪ್ರಾರಂಭವಾಗುತ್ತದೆ, ನಾವು ಕಾವಿ ಅಥವಾ ರುದ್ರಾಕ್ಷಿ ಧರಿಸಲಾರಂಭಿಸಿದಾಗ, ಅಥವಾ ದೇವಾಲಯಗಳಿಗೆ ಹೋಗಲಾರಂಭಿಸಿದಾಗ ಅಥವಾ ಜಪ ಮಾಡಲಾರಂಭಿಸಿದಾಗ ಅಲ್ಲ; ಧ್ಯಾನ ಮಾಡಲಾರಂಭಿಸಿದಾಗ ಕೂಡ ಅಲ್ಲ.

**ಪ್ರ: ಆಧ್ಯಾತ್ಮಿಕ ಜಾಗೃತಿ ಎಂದರೇನು?**

ಉ: ನಾವು ದೇವರ ಒಂದು ಅಂಶ, ನಾವು ಬೆಳಕಿನ ಕಣಗಳು, ಮತ್ತು ದೇವರು ಬೆಳಕಿನ ಸಾಗರ ಎಂಬ ವಾಸ್ತವಕ್ಕೆ ಬುದ್ಧಿಯ ಮಟ್ಟದಲ್ಲಿ ಕೂಡ ಜಾಗೃತರಾದಾಗ, ಆಧ್ಯಾತ್ಮಿಕ ಜಾಗೃತಿ ಉಂಟಾಗುತ್ತದೆ.

**ಪ್ರ: ವಾಸ್ತವತೆ ಎಂದರೇನು?**

ಉ: ನಾವು ಏನನ್ನು ಕಾಣುತ್ತೇವೆಯೋ, ಸಂವೇದಿಸುತ್ತೇವೆಯೋ ಮತ್ತು ಅನುಭವಿಸುತ್ತೇವೆಯೋ ಅದು ವಾಸ್ತವತೆ. ಅಸ್ತಿತ್ವದ ಅನೇಕ ಸ್ತರಗಳಿವೆ, ಪ್ರತಿಯೊಂದಕ್ಕೂ ತನ್ನದೇ ಆದ ವಾಸ್ತವಗಳಿವೆ. ಅವುಗಳನ್ನು ನಾವು ನಮ್ಮ ಕಣ್ಣುಗಳಿಂದ ಕಾಣಲಾಗದೆ ಇರಬಹುದು. ಆದರೆ ನಾವು ಅವುಗಳನ್ನು ವಿಭಿನ್ನ ಸಾಮರ್ಥ್ಯಗಳಿಂದ ಅರಿಯಬಲ್ಲೆವು. ದೇಹ ಮತ್ತು ಈ ಪ್ರಪಂಚದಂತಹ ವಾಸ್ತವತೆಗಳಿವೆ. ಅವು ತಾತ್ಕಾಲಿಕ. ಆಕಾಶ ಮತ್ತು ಬೆಳಕುಗಳಂತಹ ಶಾಶ್ವತ ಅಸ್ತಿತ್ವಗಳಿವೆ. ಪ್ರತಿಯೊಂದು ವಾಸ್ತವತೆ ಕೂಡಾ ಮುಖ್ಯ.

**ಪ್ರ: ನನ್ನ ಕರ್ಮಗಳಿಂದಾಗಿ ನನಗೆ ಕೆಲಸ ಸಿಗುತ್ತಿಲ್ಲವೇ?**

ಉ: ನಾನು ವೈಯಕ್ತಿಕವಾಗಿ ಪರಿಶೀಲಿಸಿ, ಅರಿತುಕೊಳ್ಳಬೇಕು. ಸಾಮಾನ್ಯವಾಗಿ ಹೇಳುವುದಾದರೆ, ಕರ್ಮಗಳು ಕೇವಲ ತಮ್ಮ ಪ್ರಭಾವ ಬೀರುತ್ತವೆ. ಕರ್ಮಗಳು ಕೆಲಸ ಸಿಕ್ಕಲು ಕಷ್ಟವಾಗುವಂತೆ ಮಾಡಬಹುದು. ಆದರೆ ಅದನ್ನು ತಡೆಯಲಾರವು.

**ಪ್ರ: ಬೇರೆಯವರ ಕರ್ಮಗಳನ್ನು ತೆಗೆದುಕೊಳ್ಳಲು ಏನಾದರೂ ತಂತ್ರಗಳಿದೆಯೇ?**

ಉ: ಇಲ್ಲ.

**ಪ್ರ: ನಿಸ್ವಾರ್ಥತೆ ಮತ್ತು ತ್ಯಾಗಗಳ ನಡುವಿನ ಭೇದವೇನು?**

ಉ: ನಿಸ್ವಾರ್ಥತೆ ಎಂದರೆ ಕೇವಲ ನಮ್ಮ ಹಿತಾಸಕ್ತಿಗಳ ಬಗ್ಗೆಯೇ ಆಲೋಚಿಸದಿರುವುದು. ತ್ಯಾಗ ಅದನ್ನು ಮೀರಿದ್ದು. ಅದು ಇನ್ನೊಬ್ಬರ ಒಳಿತಿಗಾಗಿ ನಮ್ಮ ಹಿತಾಸಕ್ತಿಗಳನ್ನು ಬಿಟ್ಟುಕೊಡುವುದು. ಅದು ಪ್ರೀತಿಯನ್ನು ಅಭಿವ್ಯಕ್ತಿಗೊಳಿಸುವುದು.

**ಪ್ರ: ತೋರಿಕೆ ಮತ್ತು ಅಭಿವ್ಯಕ್ತಿ ಇವುಗಳಿಗಿರುವ ವ್ಯತ್ಯಾಸವೇನು?**

ಉ: ವ್ಯತ್ಯಾಸ ಪ್ರಾಯಶಃ ಉದ್ದೇಶದಲ್ಲಿದೆ. ನಮ್ಮಲ್ಲಿ ಇಲ್ಲದ್ದನ್ನು ತೋರಿಸಿಕೊಳ್ಳುವುದು ತಪ್ಪು. ಆದರೆ ನಾವು ಅಭಿವ್ಯಕ್ತಿಸಿದಾಗ, ನಿಜವಾಗಿರುವುದನ್ನೇ ಅಭಿವ್ಯಕ್ತಿಸುತ್ತೇವೆ. ಅದು ಪ್ರೀತಿಯಾಗಿರಬಹುದು. ಅದು ಶುದ್ಧ ದ್ವೇಷವಾಗಿರಬಹುದು, ಶುದ್ಧ ಅಪ್ರಿಯತೆಯಾಗಿರಬಹುದು. ಸತ್ಯವಲ್ಲದ್ದನ್ನು ನಾವು ಅಭಿವ್ಯಕ್ತಿಸಲಾರೆವು.

**ಪ್ರ: ನಮ್ಮ ಸುತ್ತ ಇರುವ ಭ್ರಷ್ಟಾಚಾರ ಮತ್ತು ಹಿಂಸಾಚಾರಗಳ ವಿರುದ್ಧ ಹೋರಾಡಲು ನಾನೇನು ಮಾಡಬೇಕು?**

ಉ: ವೈಯಕ್ತಿಕವಾಗಿ ಈ ಮಟ್ಟದಲ್ಲಿ, ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ, ಆಧ್ಯಾತ್ಮಿಕ ಮಟ್ಟದಲ್ಲಿ, ನಾವು ಬೆಳಕನ್ನು ಚಾನಲ್ ಮಾಡಬಹುದು. ನಾವು ಬೆಳಕನ್ನು ಚಾನಲ್ ಮಾಡಿದಾಗ, ತಂತಾನೇ ಭ್ರಷ್ಟಾಚಾರ ನಿರ್ನಾಮವಾಗುತ್ತದೆ. ಆದರೆ ಇದಕ್ಕೆ ಒಬ್ಬ ವ್ಯಕ್ತಿಯ ಪ್ರಯತ್ನ ಸಾಕಾಗುವುದಿಲ್ಲ. ಬಹಳಷ್ಟು ಜನರು ಅದನ್ನು ಮಾಡಬೇಕಾಗುತ್ತದೆ.

**ಪ್ರ: ನಮ್ಮ ಸುತ್ತ ನಿರ್ಮಲೀಕರಣದ ಪ್ರಕ್ರಿಯೆ ನಡೆಯುತ್ತಿದೆಯೇ?**

ಉ: ಹೌದು. ನಿರ್ಮಲೀಕರಣದ ಪ್ರಕ್ರಿಯೆ, ಅಂತರ್ಗತವಾಗಿ ನಡೆಯುತ್ತಿರುವ ಕಾರ್ಯಗಳನ್ನು ಬಹಿರಂಗ ಗೊಳಿಸುವುದರಿಂದ ಪ್ರಾರಂಭವಾಗುತ್ತದೆ. ನಮ್ಮ ಸುತ್ತ, ವ್ಯಕ್ತಿಗಳಲ್ಲಿ, ಸಂಸಾರಗಳಲ್ಲಿ, ಸಮಾಜಗಳಲ್ಲಿ, ದೇಶದಲ್ಲಿ ಮತ್ತು ಪ್ರಪಂಚದಲ್ಲಿ ಇದು ಆಗುತ್ತಿರುವುದನ್ನು ನೀವು ನೋಡಬಹುದು. ಲೀಕ್‌ಗಳು, ಟೇಪ್‌ಗಳು, ಹಗರಣಗಳು ತುಂಬಾ ಒಳ್ಳೆಯ ಸಂಕೇತಗಳು ಮತ್ತು ಅವು ನಿಧಾನವಾಗಿ ನಿರ್ಮೂಲನಗೊಳ್ಳುತ್ತವೆ. ವ್ಯಕ್ತಿಗಳಲ್ಲಿ ಪ್ರಕಟವಾಗುವ ನಕಾರಾತ್ಮಕಗಳನ್ನು ವ್ಯಕ್ತಿಯೇ ಪ್ರಜ್ಞಾಪೂರ್ವಕವಾಗಿ ಅಳಿಸಿಹಾಕಬೇಕು. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

ಕೆಲವು ಸಲ ನಾನು ಮತ್ತು ಪ್ರಪಂಚ ಬೇರೆ ಬೇರೆ ಎಂಬ ವ್ಯತ್ಯಾಸವೇ ಕಾಣದಷ್ಟು ವಿಸ್ತರಿಸಿದ ಅನುಭವವಾಗುತ್ತದೆ. ದಿನದಲ್ಲಿ ಬಹುತೇಕ ಸಮಯ ನಾನು ಏಕತೆಯನ್ನು ಅನುಭವಿಸುತ್ತೇನೆ. ಹೀಗಾಗಿ ಈಗ ಎಲ್ಲಾ ಭಿನ್ನಾಭಿಪ್ರಾಯಗಳು ಮಾಯವಾಗಿವೆ. ನನಗೆ ಈಗ, ಎಲ್ಲೆಲ್ಲೂ ಮತ್ತು ಎಲ್ಲದರಲ್ಲೂ ಪ್ರೀತಿಯ ಅನುಭವವೇ ಆಗುತ್ತದೆ. ಈಗ ನನ್ನನ್ನು ಯಾವುದೋ ಒಂದು ಶಕ್ತಿ ಜೀವನಪರ್ಯಂತ ಕೆಲಸ ಮಾಡಲು ಪ್ರೇರೇಪಿಸುತ್ತಿದೆ.

– ಹೇಮಂತ್ ಶರ್ಮಾ

ಡಿಸೆಂಬರ್ 26 ರಂದು ನಾನು ಒಂದು ಮಾಲ್‌ನಲ್ಲಿ ಜನಸಂದಣಿಯ ನಡುವೆ ಕಳೆದುಹೋದೆ. ಆಗ ಬೇರೆ ದಾರಿ ಕಾಣದೆ ಬೆಳಕನ್ನು ಸಹಾಯ ಮಾಡುವಂತೆ ಬೇಡಿಕೊಂಡೆ. ಕೂಡಲೆ ನಾನು ನನ್ನ ತಂದೆಯನ್ನು ಕಂಡೆ. ಆದರೆ ಬೆಳಕಿಗೆ ಕೃತಜ್ಞತೆ ತಿಳಿಸಲು ಮರೆತೆ. ನಂತರ ದೂರದರ್ಶನದ ಪರದೆಯ ಮೇಲೆ ಪದ ಜೋಡಣೆಯ ಆಟವನ್ನು ವೀಕ್ಷಿಸುತ್ತಿದ್ದಾಗ 'LIGHT' ಎಂಬ ಅಕ್ಷರದ ಕ್ಷಣಿಕ ದರ್ಶನವಾಯಿತು. ಆಗ ನನಗೆ ನಾನು ಮೊದಲೆ ಬೆಳಕಿಗೆ ವಂದನೆ ಸಲ್ಲಿಸಬೇಕಾಗಿತ್ತು ಎಂಬುದು ನೆನಪಾಗಿ, ಬೆಳಕಿಗೆ ವಂದಿಸಿದೆ. ಈಗ ಬೆಳಕೇ ನನ್ನ ಜೀವನದ ಮಾರ್ಗದರ್ಶಕನಾಗಿದೆ.

– ದೀಕ್ಷಾ ಸುರೇಶ್

ತಪೋನಗರದ ವೀಡಿಯೋ ವೀಕ್ಷಿಸುತ್ತಿದ್ದಾಗ ಅಲ್ಲಿಯ ಕಟ್ಟಡಗಳನ್ನು ನೋಡಿ ಮೊದಲಿಗೆ ನನ್ನ ಅಂಗೈ ಮತ್ತು ಕೈಯ ಮುಂಭಾಗದಲ್ಲಿ ಜುಮ್ಮೆನಿಸಿದ ಅನುಭವವಾಯಿತು. ನಂತರ ನನ್ನ ಹೃದಯದಾದ್ಯಂತ ಏನನ್ನೋ ಹೊರಹಾಕಿದಂತಹ ಸಹಿಸಲಸಾಧ್ಯವಾದ ಅನುಭವವಾಯಿತು. ಅದು ತಪೋನಗರದ ವೀಡಿಯೋ ಮೂಲಕ ಪ್ರತಿಯೊಬ್ಬರಿಗೂ ಸಿಗುವ ಇಲ್ಲಿನ ಚೈತನ್ಯಗಳಾಗಿವೆ. ಪ್ರಪಂಚದ ಪ್ರತಿಯೊಬ್ಬರಿಗೂ ಈ ಚೈತನ್ಯಗಳು ಸಿಗಲೆಂದು ನಾನು ಪ್ರಾರ್ಥಿಸುತ್ತೇನೆ.

– ಪ್ರಗತಿ ರಾಜ್

ಕೆಲವು ದಿನಗಳ ಹಿಂದೆ ನಾನು ಧ್ಯಾನದಲ್ಲಿ ಒಬ್ಬ ದಿವ್ಯವ್ಯಕ್ತಿಯನ್ನು ಬೆಳಕಿನ ರೂಪದಲ್ಲಿ ನೋಡಿದೆ. ಅವರ ಕೈಯಲ್ಲಿ ಏನೋ ತುಂಬಿದ್ದ ಬಟ್ಟಲಿತ್ತು. ಅವರು ಅದನ್ನು ನನ್ನೆಡೆ ಚಾಚಿದರು. ಆಗ ನನ್ನ ಪಕ್ಕದಲ್ಲಿ ಬೆಳಕಿನ ರೂಪದಲ್ಲಿ ಇದ್ದ ಗುರೂಜಿಯವರು, ಆ ಬಟ್ಟಲನ್ನು ಅವರಿಂದ ಪಡೆದು ನನಗೆ ಕೊಟ್ಟರು.

ಜನವರಿಯ ಶಂಬಲ ಸೆಷನ್‌ನಲ್ಲಿ, ನನ್ನ ದೇಹ ಸಂಪೂರ್ಣವಾಗಿ ಒಂದು ವಿಶೇಷವಾದ ದಿವ್ಯ ಸುಗಂಧದಿಂದ ಆವರಿಸಿದ್ದಂತೆ ಅನ್ನಿಸಿತು.

– ನಾಗಶ್ರೀ

## ಫಾರಂ ೪ (ರೂಲ್ ೮)ರಂತೆ

ತಪೋವಾಣಿ ಕನ್ನಡ ವಾರ್ತಾಪತ್ರದ ಮಾಲೀಕತ್ವ ಮತ್ತು ಇತರ ವಿವರಗಳು

| | |
|---|---|
| 1. ಪತ್ರಿಕೆಯ ಹೆಸರು | ತಪೋವಾಣಿ |
| 2. ರಿಜಿಸ್ಟ್ರೇಷನ್ ನಂಬರ್ | KARKAN/2003/13739 |
| 3. ಪ್ರಕಟಣೆಯ ಸ್ಥಳ | ಬೆಂಗಳೂರು |
| 4. ಪ್ರಕಟಣೆಯ ಅವಧಿ | ತಿಂಗಳಿಗೊಮ್ಮೆ |
| 5. ಮುದ್ರಕರು, ಪ್ರಕಾಶಕರು ಮತ್ತು ಸಂಪಾದಕರ ಹೆಸರು | ಶ್ಯಾಮಲಾದೇವಿ |
| ರಾಷ್ಟ್ರೀಯತೆ | ಭಾರತೀಯರು |
| ವಿಳಾಸ | ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್-562149 |
| 6. ಮುದ್ರಣವಾಗುವ ಸ್ಥಳ | ಆರ್ಟ್ ಪ್ರಿಂಟ್, 719/A, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560086. |
| 7. ಮಾಲೀಕರ ಹೆಸರು | ಮಾನಸ ಫೌಂಡೇಷನ್(ರಿ) |

ನಾನು, ಶ್ಯಾಮಲಾದೇವಿ, ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ವಿವರಗಳು ನನ್ನ ತಿಳಿವಳಿಕೆ, ನನ್ನ ನಂಬಿಕೆ ಪ್ರಕಾರ ಸಂಪೂರ್ಣ ಸತ್ಯವಾಗಿವೆ.

ಸಹಿ
ಬೆಂಗಳೂರು ಶ್ಯಾಮಲಾದೇವಿ
ತಾ: 25-2-2011 ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ